174

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1232 (1030)

ಸದಸ್ಯರ ಹೆಸರು : ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಉತ್ತರಿಸುವ ದಿನಾಂಕ : 19.12.2024

| ಪ್ರಶ್ನೆ | ಉತ್ತರ |
|---|---|
| ಅ) ಒಂದೇ ದಿನಾಂಕದಂದು ಜಿಲ್ಲಾವಾರು ಕೇಡರುಗಳಿಗೆ ನೇರ ನೇಮಕಾತಿ ಮುಖಾಂತರ ನೇಮಕಗೊಂಡ ನೌಕರರನ್ನು ಒಗ್ಗೂಡಿಸಿ, ಒಂದು ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಸದರಿ ನೌಕರರ ನಡುವಿನ ಸಾಪೇಕ್ಷ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ ಯಾವ ನಿಯಮದ ಪ್ರಕಾರ ಸಿದ್ಧಪಡಿಸಬೇಕು: | ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 7Aರನ್ವಯ ಸಿದ್ಧಪಡಿಸಬೇಕಾಗುತ್ತದೆ. |
| ಆ) ಜೇಷ್ಠತೆಗೂ ಹಾಗೂ ಹುದ್ದೆ ಸ್ಥಿರೀಕರಣಕ್ಕೂ ಏನಾದರೂ ಸಂಬಂಧವಿದೆಯೇ: (Is seniority linked with confirmation) | ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 2(ಬಿ)ರಲ್ಲಿ ಈ ಕೆಳಕಂಡಂತೆ ಅಸ್ಪದವನ್ನು ಕಲ್ಪಿಸಲಾಗಿರುತ್ತದೆ:-<br>2(b) The Seniority inter-se of officers who are confirmed shall be determined according to dates of confirmation, but where the date of confirmation of any two officers is the same, their relative seniority will be determined by their senirity inter-se while officiating in the same post and if not, by their seniority inter-se in lower grade.<br><br>ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು, 1977ರ ನಿಯಮ 9ರಲ್ಲಿ ಈ ಕೆಳಕಂಡಂತೆ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ:-<br><br>" 9. Confimation- Subject to sub-rule (4) of rule 19 of the Karnataka State Civil Services (General Recruitment) Rules, 1977, a probationer who has been declared to have satisfactorily completed his probation shall be confirmed at the earliest opportunity in any substantive vacancy which may exist or arise;<br><br>Provided that where more than one approved probationer is available for such confirmation, the senior-most approved probationer on the date of vacancy shall be confirmed." |
| ಇ) ಮಾನ್ಯ ರಾಜ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:4685-4688/1995 Lingaiah k and others VS. State and Othersರ | ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಹೊಂದಿದ ನೌಕರರ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) |

| | |
|---|---|
| ಆದೇಶದ ಪ್ಯಾರಾ 33ರ ಪ್ರಕಾರ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ ನಿಯಮ 5 ಎಷ್ಟು ಅವಧಿಯವರೆಗೆ ಜಾರಿಯಲ್ಲಿರುತ್ತದೆ: | ನಿಯಮಗಳು, 1957ರ ನಿಯಮ 5ನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 18ರೊಡನೆ ಸಹವಾಚನ ಮಾಡಿಕೊಂಡಂತೆ ಇವುಗಳನ್ವಯ ನಿರ್ಧರಿಸಬೇಕಾಗುತ್ತದೆ. |
| ಈ) ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 9ರನ್ವಯ ಹುದ್ದೆ ಸ್ಥಿರೀಕರಣದ (Confirmation) ಅಂಶವನ್ನು ಜೇಷ್ಠತೆ ನಿರ್ಧರಿಸುವಾಗ ಪರಿಗಣಿಸಲು ಸದರಿ ಪ್ರಕರಣದಲ್ಲಿ ತಿಳಿಸಲಾಗಿದೆಯೇ: | ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 4685-4688/ 1995 Lingaiah K and others VS. State and Others ರಲ್ಲಿ ನೀಡಿದ ಆದೇಶದ ಪ್ಯಾರಾ 33ರಲ್ಲಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು. 1957ರ ನಿಯಮ 2(ಬಿ) ಮತ್ತು ನಿಯಮ 5 ಹಾಗೂ ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು, 1977ರ ನಿಯಮ 9ರ ಬಗ್ಗೆ ವ್ಯಾಖ್ಯಾನಿಸಲಾಗಿದ್ದು, ಇದು ಒಂದು ವಾಸ್ತವಾಂಶವಾಗಿದ್ದು, ಸ್ವಯಂವೇಧ್ಯವಾಗಿರುತ್ತದೆ. ಮಾನ್ಯ ನ್ಯಾಯ ಮಂಡಳಿಯು ನೀಡಿರುವ ಸದರಿ ವ್ಯಾಖ್ಯಾನವನ್ನು ಮರು ವ್ಯಾಖ್ಯಾನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) ಹಾಗಾದರೆ ಒಂದೇ ದಿನಾಂಕದಂದು ನೇರ ನೇಮಕಾತಿ ಮುಖಾಂತರ ನೇಮಕವಾದ ನೌಕರರು ಬೇರೆ-ಬೇರೆ (2 ವರ್ಷ ಹಾಗೂ 2 ವರ್ಷಗಳ ನಂತರ ಪರಿವೀಕ್ಷಣೆ ಅವಧಿ ಘೋಷಣೆ ಹೊಂದಿದಾಗ ) ದಿನಾಂಕಗಳಲ್ಲಿ ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 9ರನ್ವಯ ಹುದ್ದೆ ಸ್ಥಿರೀಕರಣ ಹೊಂದಿದಾಗ ಸದರಿ ಕೆ.ಎ.ಟಿ ಆದೇಶದ ಪ್ರಕಾರ ನೌಕರರ ನಡುವಿನ ಜೇಷ್ಠತೆಯನ್ನು ಯಾವ ರೀತಿ ನಿರ್ಧರಿಸಬೇಕು? | |
| ಊ) ಸದರಿ ಆದೇಶವು ಈ ಪ್ರಕರಣಕ್ಕೆ ಮಾತ್ರ ಸೀಮಿತವೇ ಅಥವಾ ಈ ರೀತಿಯ ಎಲ್ಲಾ ಪ್ರಕರಣಗಳಿಗೂ ಅನ್ವಯವಾಗುತ್ತವೆಯೇ? | ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಲಿಂಗಯ್ಯ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಕರ್ನಾಟಕ ಸರ್ಕಾರಿ ನೌಕರರ ಜ್ಯೇಷ್ಠತೆ ನಿಯಮಗಳನ್ನು ವ್ಯಾಖ್ಯಾನಿಸಿರುತ್ತದೆ. ಸದರಿ ವ್ಯಾಖ್ಯಾನವು ಎಲ್ಲಾ ಪ್ರಕರಣಗಳಿಗೂ ಅನ್ವಯವಾಗುತ್ತದೆ. |

ಸಂಖ್ಯೆ: ಸಿಆಸುಇ 415 ಸೆನೆನಿ 2024

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ